## ಪಶ್ಚಿಮ ವಲಯ ವ್ಯಾಪ್ತಿಯ, ಮಲ್ಲೇಶ್ವರಂ ಉಪವಿಭಾಗದ ಗಾಯತ್ರಿನಗರ ವಾರ್ಡ್-76ರಲ್ಲಿ ದಿನಾಂಕ: 21-02-2022 ರಂದು ನಡೆದ ವಾರ್ಡ್ ಸಮಿತಿ ಸಭೆಯ

## ಸಭಾ ನಡವಳಿಗಳು.

ಸಮಯ: ಬೆಳಗ್ಗೆ : 11:00 ಘಂಟೆಗೆ

ವಾರ್ಡ್ ಸಂಖ್ಯೆ-76 ಗಾಯತ್ರಿನಗರ

ದಿನಾಂಕ: 21-02-2022 ರಂದು ವಾರ್ಡ್ ಸಂಖ್ಯೆ: 76ರ ಫೆಬ್ರವರಿ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ವಾರ್ಡ್ ಸಂಖ್ಯೆ: 76ರ ಸಹಾಯಕ ಅಭಿಯಂತರರು, ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಸದಸ್ಯರುಗಳೆಲ್ಲರ ಕಿರು ವಿವರ ತಿಳಿಸಿ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಕೊಂಡು ಸಭೆ ನಡೆಸಲು ಕೋರಿದರು.

**ಸಭೆಗೆ ಹಾಜರಿದ್ದವರು:**

| | |
|---|---|
| 1 | ಶ್ರೀ ಸತೀಶ್‌ಕುಮಾರ್.ಬಿ, ಸಹಾಯಕ ಅಭಿಯಂತರರು, ವಾರ್ಡ್-76 ಗಾಯತ್ರಿನಗರ ಹಾಗೂ ಕಾರ್ಯದರ್ಶಿ |
| 2 | ಶ್ರೀ ಕನಕರಾಜು, ಕಂದಾಯ ಪರಿವೀಕ್ಷಕರು |
| 3 | ಶ್ರೀಮತಿ ಶಾರದಾ ಬಾಯಿ, ಹಿರಿಯ ಆರೋಗ್ಯ ಪರಿವೀಕ್ಷಕರು |
| 4 | ಡಾ॥ ಅಂಜನಾ, ಆರೋಗ್ಯ ಅಧಿಕಾರಿ |
| 5 | ಡಾ॥ ಲಾವಣ್ಯ.ಟಿ, ಆರೋಗ್ಯ ಅಧಿಕಾರಿ |
| 6 | ಶ್ರೀಮತಿ ಮಂಜುಳ.ಎಸ್ |
| 7 | ಶ್ರೀಮತಿ ಶಿಲ್ಪ.ಎನ್, ಕಿರಿಯ ಆರೋಗ್ಯ ಪರಿವೀಕ್ಷಕರು |
| 8 | ಶ್ರೀ ಆರ್.ಸಂತೋಷ್, ಕೆಲಸ ಪರಿವೀಕ್ಷಕರು |
| 9 | ಶ್ರೀ ಸಂತೋಷ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 10 | ಶ್ರೀ ಈಶ್ವರ್ ಗೌಡ, ವಾರ್ಡ್ ಅಧ್ಯಕ್ಷ |
| 11 | ಶ್ರೀ ಕೆ. ಗೋವಿಂದರಾಜು, ಸ್ಯಾನಿಟರಿ ದಫೇದಾರ್ |
| 12 | ಶ್ರೀಮತಿ ಕೃಪಾ ಪ್ರಕಾಶ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಶ್ರೀ ಚಂದ್ರಶೇಖರ್.ಹೆಚ್.ಆರ್ ನೋಡಲ್ ಅಧಿಕಾರಿಗಳು ವಾರ್ಡ್-76 ಇವರು ಮುಖ್ಯಮಂತ್ರಿ ಕಾರ್ಯಕ್ರಮ ಇರುವುದರಿಂದ ಸಭೆಗೆ ಹಾಜರಾಗಲು ಸಾಧ್ಯವಾಗದ ಕಾರಣ ಸಹಾಯಕ ಅಭಿಯಂತರರು, ವಾರ್ಡ್-76 ರವರಿಗೆ ಸಭೆಯನ್ನು ನಡೆಸಲು ದೂರವಾಣಿ ಮುಖಾಂತರ ಸೂಚಿಸಿರುತ್ತಾರೆ.

ಕಂದಾಯ ಇಲಾಖೆ :

- ಸಭೆಯಲ್ಲಿ ಹಾಜರಿದ್ದ ಕಂದಾಯ ಅಧಿಕಾರಿಗಳು ಕಂದಾಯವನ್ನು ವಸೂಲಿ ಮಾಡಲಾಗುತ್ತಿದೆ ಎಂದು ತಿಳಿಸಿದರು. ಕಂದಾಯವನ್ನು ವಸೂಲಿ ಮಾಡಲು ಟಾರ್ಗೆಟ್ ಫಿಕ್ಸ್ ಮಾಡಲಾಗಿದೆ ಎಂದು ತಿಳಿಸಿದರು. ಕಂದಾಯ ಪಾವತಿಸದವರಿಗೆ ನೋಟೀಸ್ ಜಾರಿ ಮಾಡಿ ಕಂದಾಯ ವಸೂಲಿ ಮಾಡುವಂತೆ ಸಭೆಯಲ್ಲಿ ಸೂಚಿಸಲಾಯಿತು.

ಆರೋಗ್ಯ ಇಲಾಖೆ :

- ಸಭೆಯಲ್ಲಿ ಹಾಜರಿದ್ದ ಆರೋಗ್ಯಾಧಿಕಾರಿಗಳು ಕೋವಿಡ್-19ನ ಪ್ರಕರಣಗಳು ಕಮ್ಮಿಯಾಗಿದೆ ಎಂದು ತಿಳಿಸಿದರು. ಕಳೆದ 10 ದಿನಗಳಿಂದ 4-ಕೋವಿಡ್ ಪಾಸಿಟಿವ್ ಪ್ರಕರಣಗಳು ಕಂಡುಬಂದಿದ್ದು, 3 ಜನ ಹೋಂ ಐಸೋಲೇಶನ್‌ನಲ್ಲಿ ಹಾಗೂ ಒಬ್ಬರು ಆಸ್ಪತ್ರೆಯಲ್ಲಿ ದಾಖಲಾಗಿರುತ್ತಾರೆ ಎಂದು ತಿಳಿಸಿದರು. ಫೆಬ್ರವರಿ 27 ರಂದು 4 ಟ್ರಾನ್‌ಸಿಟ್ ಪಾಯಿಂಟ್‌ಗಳಲ್ಲಿ ಹಾಗೂ ಫೆಬ್ರವರಿ 28, ಮಾರ್ಚ್ 1 ಹಾಗೂ 2 ರಂದು ಸುಮಾರು 130 ಸಿಬ್ಬಂದಿ ಮನೆಮನೆಗೆ ತೆರಳಿ ಪಲ್ಸ್‌ಪೋಲಿಯೋ ಹಾಕುವ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಾಗಿ ತಿಳಿಸಿದರು. ಆಸ್ಪತ್ರೆಯಲ್ಲಿ ಔಷಧಿ ಹಾಗೂ ಇನ್ನಿತರೆ ವಸ್ತುಗಳಿಗಾಗಿ ARS Fund ಅನ್ನು ಕಮಿಟಿಯಲ್ಲಿ ಅನುಮೋದನೆ ಮಾಡಬೇಕಾಗಿರುತ್ತದೆ ಎಂದು ಆರೋಗ್ಯಾಧಿಕಾರಿಗಳು ತಿಳಿಸಿದರು.

ಆರೋಗ್ಯ ಇಲಾಖೆ (ಘನತ್ಯಾಜ್ಯ):

- ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು Conservancyಗಳಲ್ಲಿ ಸ್ವಚ್ಛಗೊಳಿಸಿರುವುದಾಗಿ ತಿಳಿಸಿದರು. ದೇವಯ್ಯ ಪಾರ್ಕ್ ಬಳಿ Mesh ಅನ್ನು ಅಳವಡಿಸುವುದಾಗಿ ತಿಳಿಸಿರುತ್ತಾರೆ. ಅಂಗಡಿಗಳ ಪರವಾನಿಗೆ ನವೀಕರಣದ ಬಗ್ಗೆ ಕ್ರಮಕೈಗೊಳ್ಳಲು ಸೂಚಿಸಲಾಯಿತು. ಕೋಳಿ ಅಂಗಡಿಗಳ ಪರವಾನಿಗೆ ನವೀಕರಣದ ಬಗ್ಗೆ Veternary inspector ನಾಗೇಶ್ ರವರಿಗೆ ತಿಳಿಸಲು ಸೂಚಿಸಲಾಗಿರುತ್ತದೆ.

ಮಾರ್ಷಲ್‌ರವರು:

- ಕಸವನ್ನು ಸಂಗ್ರಹಿಸುವಾಗ ಸೆಗ್ರಿಗೇಶನ್ ಮಾಡಿ ನೀಡುವಂತೆ ಜನರಿಗೆ ಜಾಗೃತಿ ಮೂಡಿಸಲು ಸಭೆಯಲ್ಲಿ ತಿಳಿಸಲಾಯಿತು. ಹಾಗೂ Railway Parallel ರಸ್ತೆಯಲ್ಲಿ ಕೋಳಿ ಕಸವನ್ನು ಚೀಲಗಳಲ್ಲಿ ತಂದು ರಸ್ತೆ ಬದಿಯಲ್ಲಿ ಇಡಲಾಗುತ್ತಿದ್ದು, ಇದನ್ನು ತಡೆಯಲು ರಾತ್ರಿ ವೇಳೆ ಗಸ್ತು ತಿರುಗಲು ಸೂಚಿಸಲಾಯಿತು.

BWSSB ಇಲಾಖೆ:

- ಡಿ ಬ್ಲಾಕ್‌ಗೆ ಸಂಬಂಧಿಸಿದ BWSSBಯ ಅಧಿಕಾರಿಗಳು ಸಭೆಗೆ ಹಾಜರಾಗುತ್ತಿಲ್ಲವಾದ ಕಾರಣ ಮುಂದಿನ ಸಭೆಗೆ ತಪ್ಪದೇ ಇವರನ್ನು ಹಾಜರಾಗುವಂತೆ ಸೂಚಿಸಲು ನಿರ್ಧರಿಸಲಾಯಿತು.

ಬಿಬಿಎಂಪಿ ವಿದ್ಯುತ್ ದೀಪಗಳ ವಿಭಾಗ

- ಈ ವಿಭಾಗದವರು ಸಭೆಗೆ ಹಾಜರಾಗದೇ ಇದ್ದು, ವಿದ್ಯುತ್ ದೀಪಗಳ ಬಗ್ಗೆ ದೂರುಗಳನ್ನು ತಿಳಿಸಲು ಸಾಧ್ಯವಾಗದ ಕಾರಣ ಮುಂದಿನ ಸಭೆಗೆ ಇವರ ವಿಭಾಗದ ಪ್ರತಿನಿಧಿಯನ್ನು ತಪ್ಪದೇ ಹಾಜರಾಗುವಂತೆ ಸೂಚಿಸಲು ನಿರ್ಧರಿಸಲಾಯಿತು.

ಬಿಬಿಎಂಪಿ ಕಾಮಗಾರಿ ವಿಭಾಗ

- ಹರಿಶ್ಚಂದ್ರಘಾಟ್‌ನಲ್ಲಿ ಹೊಸದಾಗಿ ನಿರ್ಮಿಸಿರುವ ಕಟ್ಟಡವನ್ನು ಪಶ್ಚಿಮ ವಲಯದ ಯೋಜನೆಗಳ ವಿಭಾಗದಿಂದ ಹಸ್ತಾಂತರಿಸಿಕೊಳ್ಳಲು ಸೂಚಿಸಲಾಯಿತು. ಅಂಗನವಾಡಿ ವಿದ್ಯುತ್ ಮೀಟರ್ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ವಾರ್ಡ್ ಕಛೇರಿಯ ಹಿಂಭಾಗದಲ್ಲಿರುವ ಸಭಾಂಗಣದ ಶೀಟ್‌ಗಳು ಸೋರುತ್ತಿದ್ದು, ಅದನ್ನು ಗುತ್ತಿಗೆದಾರರಿಂದ ಸರಿಪಡಿಸಲು ತಿಳಿಸಲಾಯಿತು

ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿಯವರು ವಂದಾನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಕಾರ್ಯದರ್ಶಿ,
ಸಹಾಯಕ ಅಭಿಯಂತರರು, ವಾರ್ಡ್–76
ಗಾಯತ್ರಿನಗರ, ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ

ಅಧ್ಯಕ್ಷರು
ನೋಡಲ್ ಅಧಿಕಾರಿಗಳು, ವಾರ್ಡ್–76
ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ